# ಕೀರ್ತಿ ಸಾಹಸೀ ಅವತಾರ


‘ಅಕ್ಕ’ ಎಂಬ ವೆಬ್ ಸರಣಿಯೊಂದರ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ಒಂದು ಕಡೆ ಕೀರ್ತಿ ಸುರೇಶ್. ಮತ್ತೊಂದು ಕಡೆ ರಾಧಿಕಾ ಆಪ್ಟೆ. ಪ್ರಮುಖ ಪಾತ್ರದಲ್ಲಿ ತಾನ್ವಿ ಆಜ್ಮಿ. ಇವರೆಲ್ಲರನ್ನು ಒಂದು ಕಲ್ಪಿತ ಪ್ರದೇಶದ ಹೊಡೆದಾಟದ ಕಥನದ ವ್ಯಾಪ್ತಿಗೆ ತಂದು ನಿಲ್ಲಿಸಿದ್ದಾರೆ ನಿರ್ದೇಶಕ ಧರ್ಮರಾಜ್ ಶೆಟ್ಟಿ.

ಪೆರ್ನೂರು ಎನ್ನುವ ಕಲ್ಪಿತ ಪ್ರದೇಶವೊಂದರಲ್ಲಿ 1980ರ ದಶಕದಲ್ಲಿ ನಡೆಯುವ ಕಥನವೇ ಈ ವೆಬ್ ಸರಣಿಯ ತಿರುಳು ಎಂದು ನಿರ್ದೇಶಕರು ಹೇಳಿದ್ದಾರೆ.

ಹೆಣ್ಣುಮಕ್ಕಳ ಪ್ರಾಬಲ್ಯ ಇರುವ ಪೆರ್ನೂರನ್ನು ವಶಪಡಿಸಿಕೊಳ್ಳಲು ಹೊರಗಿನ ಶಕ್ತಿಗಳು ಮುಂದಾಗುತ್ತವೆ. ಅದರ ವಿರುದ್ಧ ವನಿತೆಯರು ನಡೆಸುವ ಹೋರಾಟವನ್ನು ಈ ವೆಬ್ ಸರಣಿ ಒಳಗೊಂಡಿದೆ. ಸೀರೆ ಉಟ್ಟು, ನತ್ತು ಹಾಕಿದ ಕೀರ್ತಿ ಹೊಡೆದಾಟಕ್ಕೆ ಮುಂದಾದಾಗ ಗಟ್ಟಿಗಿತ್ತಿಯಾಗುವ ಪರಿ ನೋಡುಗರ ಮೈ ನವಿರೇಳಿಸುವಂತಿದೆ ಎಂದಿದ್ದಾರೆ ಧರ್ಮರಾಜ್ ಶೆಟ್ಟಿ. ಅವರ ಈ ಸಾಹಸ ಕಥನಕ್ಕೆ ಯಶ್ ರಾಜ್ ಫಿಲ್ಮ್ಸ್ ನಿರ್ಮಾಣ ಸಂಸ್ಥೆಯು ಹಣ ಹೂಡಿಕೆ ಮಾಡಿದೆ.

‘ತೇರಿ’ ತಮಿಳು ಚಿತ್ರದ ರಿಮೇಕ್ ‘ಬೇಬಿ ಜಾನ್’ ಹಿಂದಿ ಸಿನಿಮಾದಲ್ಲಿ ವರುಣ್ ಧವನ್ ಜೊತೆ ಕೀರ್ತಿ ಸುರೇಶ್ ಇತ್ತೀಚೆಗೆ ನಟಿಸಿದ್ದರು. ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಸೋಲುಂಡಿತ್ತು.



# ಮೊನಾಲಿಸಾ ಸಿನಿ ಸಮಯ

ಮಧ್ಯಪ್ರದೇಶದ ಮಹೇಶ್ವರ ಹಳ್ಳಿಯು ಯಾವುದಕ್ಕೆ ಹೆಸರುವಾಸಿ ಎಂದು ತಿಂಗಳುಗಳ ಹಿಂದೆ ಯಾರನ್ನೇ ಕೇಳಿದ್ದರೂ, ‘ಅಹಲ್ಯಾ ಕೋಟೆಗೆ ಈ ಊರು ಫೇಮಸ್ಸು’ ಎಂಬ ಉತ್ತರ ಬರುತ್ತಿತ್ತು. ಈಗ ‘ಮೊನಾಲಿಸಾಗೆ ಈ ಊರು ಫೇಮಸ್ಸು’ ಎಂದು ಹೊಸ ಮಾತು ಚಾಲ್ತಿಗೆ ಬಂದಿದೆ. ಕುಂಭಮೇಳದಲ್ಲಿ ರುದ್ರಾಕ್ಷಿ ಮಾರುತ್ತಿದ್ದ ಮೊನಾಲಿಸಾ ಭೋಸ್ಲೆ ಎಂಬ ಹುಡುಗಿಯು ತನ್ನ ಚಿತ್ತಾಪಹಾರಿ ಕಣ್ಣುಗಳಿಂದ ಕಾವ್ಯಕನ್ನಿಕೆ, ಫೋಟೊ ಕಣ್ಮಣಿಯಾಗಿ ಕಂಗೊಳಿಸಿದ್ದನ್ನು ಕಂಡೆವು. ಕೆಲವು ಫ್ಯಾಷನ್ ಡಿಸೈನರ್‌ಗಳು ಆಕೆಯನ್ನು ಪಾರ್ಲರ್‌ಗೆ ಕರೆದುಕೊಂಡು ಹೋಗಿ ಮೇಕ್ ಓವರ್ ಬೆಳವಣಿಗೆಗಳ ಮಾಡಿಸಿದ ಸುದ್ದಿಯನ್ನೂ ಓದಿದೆವು. ಈಗ ಮೊನಾಲಿಸಾ ಬಾಲಿವುಡ್ ಸಿನಿಮಾದಲ್ಲಿ ಅಭಿನಯಿಸುವುದು ನಿಕ್ಕಿಯಾಗಿದೆ.

ನಿರ್ದೇಶಕ ಸನೋಜ್ ಮಿಶ್ರಾ ತಮ್ಮ ಅಧಿಕೃತ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ಹುಡುಗಿಯನ್ನು ಪಾತ್ರಕ್ಕೆ ಆಯ್ಕೆ ಮಾಡಿರುವ ವಿಷಯವನ್ನು ಹಂಚಿಕೊಂಡಿದ್ದಾರೆ. ‘ದಿ ಡೈರಿ ಆಫ್ ಮಣಿಪುರ್’ ಹೆಸರಿನ ಚಿತ್ರದಲ್ಲಿ ಸೇನಾ ಅಧಿಕಾರಿಯ ಮಗಳ ಪಾತ್ರವನ್ನು ಮೊನಾಲಿಸಾ ಅವರಿಗೆ ನೀಡಲು ಸನೋಜ್ ನಿರ್ಧರಿಸಿದ್ದಾರೆ. ಕೇವಲ ಫೋಟೊಶೂಟ್ ಮಾಡಿ ಅವರು ಈ ಆಯ್ಕೆ ಮಾಡಿಲ್ಲ. ಮೂರು ತಿಂಗಳು ಮೊನಾಲಿಸಾ ಅವರನ್ನು ಅಭಿನಯ ಕಮ್ಮಟಕ್ಕೆ ಕಳುಹಿಸಿ, ಆನಂತರವೇ ಕ್ಯಾಮೆರಾ ಎದುರು ನಿಲ್ಲಿಸಲು ಸ್ಪಷ್ಟ ಯೋಜನೆ ರೂಪಿಸಿದ್ದಾರೆ.

‘ನಾನು ಇನ್‌ಸ್ಟಾಗ್ರಾಂನಲ್ಲಿ ಈ ಹುಡುಗಿಯ ವಿಷಯವನ್ನೆಲ್ಲ ಗಮನಿಸುತ್ತಾ ಬಂದಿದ್ದೆ. ನನ್ನ ಚಿತ್ರದ ಸೇನಾ ಅಧಿಕಾರಿಯ ಮಗಳ ಪಾತ್ರಕ್ಕೆ ಹೊಂದುವ ಚಹರೆ ಇದೆ ಎನಿಸಿತು. ಹೀಗಾಗಿ ಪಾತ್ರಕ್ಕೆ ಆರಿಸಿದೆ’ ಎಂದು ಸನೋಜ್ ಹೇಳಿದ್ದಾರೆ.

ಮಹೇಶ್ವರ ಗ್ರಾಮಕ್ಕೆ ಹೋಗಿ, ಮೊನಾಲಿಸಾ ಕುಟುಂಬದವರನ್ನು ಭೇಟಿ ಮಾಡಿದ ನಂತರ ಅವರು ಸಿನಿಮಾಗೆ ಹುಡುಗಿಯನ್ನು ಆಯ್ಕೆ ಮಾಡಿರುವ ಸಂಗತಿಯನ್ನು ಸ್ಪಷ್ಟಪಡಿಸಿದರು.

ಮೊನಾಲಿಸಾ ಭೋಸ್ಲೆ ಇನ್ನೂ ಹದಿನಾರರ ಹುಡುಗಿ. ಅವರ ಮನೆಯವರು ಸರಳವಾಗಿ ಬದುಕುತ್ತಿದ್ದಾರೆ. ಮಗಳ ಬದುಕಿಗೆ ತಿರುವು ಸಿಕ್ಕರೆ ತಮ್ಮ ಭವಿಷ್ಯವೂ ಚೆನ್ನಾಗಿ ಇರಲಿದೆ ಎಂಬ ಸಹಜವಾದ ಬಯಕೆ ಆ ಕುಟುಂಬದವರದ್ದಾಗಿದೆ.

ಒಂದು ಫೋಟೊ ಅಥವಾ ವಿಡಿಯೊ ವೈರಲ್ ಆದ ನಂತರ, ಚೆಂದದ ಹುಡುಗಿಯರನ್ನು ಮಾರುಕಟ್ಟೆಯೊಂದು ಹಿಂಬಾಲಿಸುವ ಹಾಗೂ ಆನಂತರದ ಆತಂಕಕಾರಿ ಬೆಳವಣಿಗೆಗಳ ಬಗೆಗೆ ಮೊನಾಲಿಸಾ ಕುಟುಂಬದವರೂ ಕೇಳಿದ್ದಾರೆ. ಸನೋಜ್ ಈ ಎಲ್ಲವನ್ನೂ ಅವರಿಗೆ ಮನವರಿಕೆ ಮಾಡಿಸಿಯೇ, ಮೊನಾಲಿಸಾ ಅವರನ್ನು ಕಮ್ಮಟಕ್ಕೆ ಕಳುಹಿಸುವಂತೆ ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೊನಾಲಿಸಾ ಅವರಿಗೆ ಎಷ್ಟು ಸಂಭಾವನೆ ನಿಗದಿಪಡಿಸಲಾಗಿದೆ ಎನ್ನುವುದನ್ನು ಸನೋಜ್ ಅಧಿಕೃತವಾಗಿ ಹೇಳಿಲ್ಲ. ಇಪ್ಪತ್ತೊಂದು ಲಕ್ಷ ರೂಪಾಯಿ ಸಂಭಾವನೆ ಸಲ್ಲಲಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಈ ಮೊದಲು ‘ದಿ ಡೈರಿ ಆಫ್ ವೆಸ್ಟ್ ಬೆಂಗಾಲ್’ ಎಂಬ ಚಿತ್ರವನ್ನು ಸನೋಜ್ ನಿರ್ದೇಶಿಸಿದ್ದಾರೆ.